ಆಯುರ್ವೇದ ಪದವೀಧರ ವೈದ್ಯರು ಅಲೋಪತಿ ವೈದ್ಯಕೀಯವನ್ನು ಅನುಸರಿಸುತ್ತಿರುವುದು

785 - ಶ್ರೀ ಕುಂಬೈ ಸುಂದರ್ ರಾವ್ (ಸುರತ್ಕಲ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಒಟ್ಟು ಸರ್ಕಾರಿ ಮತ್ತು ಖಾಸಗಿ ಆಯುರ್ವೇದ ಕಾಲೇಜುಗಳ ಸಂಖ್ಯೆ ಎಷ್ಟು? ಮುಂದಿನ ಶೈಕ್ಷಣಿಕ ವರ್ಷದಲ್ಲಿ ಎಷ್ಟು ಕಾಲೇಜುಗಳಿಗೆ ಮಂಜೂರಾತಿ ದೊರೆಯಲಿದೆ?*

ಆ) *ಆಯುರ್ವೇದ ಪದವೀಧರ ವೈದ್ಯರು ಅಲೋಪತಿಗೆ ವೈದ್ಯಕೀಯವನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ?*

ಇ) *ಈ ಕ್ರಮವನ್ನು ತಡೆಗಟ್ಟುವ ಉದ್ದೇಶ ಸರ್ಕಾರಕ್ಕೆ ಇದೆಯೇ?*

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಈಗ ಒಟ್ಟು 39 ಆಯುರ್ವೇದ ಕಾಲೇಜುಗಳು ನಡೆಯುತ್ತಿವೆ. ಅವುಗಳಲ್ಲಿ 3 ಸರ್ಕಾರಿ, 5 ಖಾಸಗಿ ಅನುದಾನಿತ ಮತ್ತು ಉಳಿದ 31 ಅನುದಾನ ರಹಿತ ಕಾಲೇಜುಗಳು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೆ ಶಿಫಾರಸ್ಸು ಮಾಡಿಬಂದ ನಂತರ ಅವಶ್ಯಕತೆ ಇದ್ದಲ್ಲಿ ಮಾತ್ರ ಕಾಲೇಜುಗಳಿಗೆ ಮಂಜೂರಾತಿ ನೀಡಲು ಪರಿಶೀಸಲಾಗುವುದು.

ಆ) ಹೌದು.

ಇ) ಸುಪ್ರೀಂ ಕೋರ್ಟ್ ಆದೇಶದನ್ವಯ ಆಯುರ್ವೇದದ ಪದವೀಧರರು ಅಲೋಪತಿ ಔಷಧಿಗಳನ್ನು ಹಾಗೂ ಅಲೋಪತಿ ವೈದ್ಯರು ಆಯುರ್ವೇದದ ಔಷಧಗಳನ್ನು ಉಪಯೋಗಿಸುವಂತಿಲ್ಲ. ಪದವೀಧರರು ಯಾವ ಪದ್ಧತಿಯ ಶಿಕ್ಷಣವನ್ನು ಪಡೆದಿರುತ್ತಾರೋ ಆ ಪದ್ಧತಿಯಲ್ಲಿ ಮಾತ್ರ ವೈದ್ಯ ವೃತ್ತಿಯನ್ನು ಮಾಡಬೇಕಾಗುತ್ತದೆ. ಈ ಬಗ್ಗೆ ನಿರ್ದಿಷ್ಟ ದೂರುಗಳು ಬಂದಲ್ಲಿ ಕಾಯ್ದೆಯ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಕನ್ನಡ ಕಡ್ಡಾಯ ಶಿಕ್ಷಣ ಕುರಿತು

787 - ಶ್ರೀ ಕುಂಬೈ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ವರ್ಷಗಳಿಂದ ಐದನೆಯ ತರಗತಿಯವರೆಗೆ ಕನ್ನಡ ಕಡ್ಡಾಯವಾಗಿ ಮಾಡಲಾಗಿದೆ?*

ಆ) *ಕನ್ನಡ ಕಡ್ಡಾಯವಾಗಿ ಅಳವಡಿಕೆಯಾಗಿಲ್ಲ ಎಂಬುದು ಇಂದಿನ ಅನುಭವ ಹೌದೆ?*

ಇ) *ಹಾಗಿದ್ದಲ್ಲಿ ಕಾರಣ ಏನು, ಸರ್ಕಾರದ ಉದಾಸೀನವೇ, ಅಥವಾ ವೈಫಲ್ಯವೇ?*

ಈ) *ಆಂಗ್ಲ ಮಾಧ್ಯಮ ಶಾಲೆಗಳು ಕನ್ನಡ ಕಡ್ಡಾಯವನ್ನು ಪರವಾನಿಗೆ ಪಡೆಯಲು ಮಾಧ್ಯಮವಾಗಿ ಉಪಯೋಗಿಸುತ್ತಿರುವುದು ನಿಜವಲ್ಲವೇ?*

ಶ್ರೀ ಹೆಚ್. ಜಿ ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1994-95ನೇ ಸಾಲಿನಲ್ಲಿ ಜಾರಿಗೆ ಬಂದಿರುವ ಭಾಷಾ ನೀತಿಯನ್ವಯ 1 ರಿಂದ 4ನೇ ತರಗತಿಯವರೆಗಿನ ಶಿಕ್ಷಣ ಮಾಧ್ಯಮವು ಮಗುವಿನ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮವಾಗಿರುತ್ತದೆ. ಹಾಗಾಗಿ ಮಾತೃಭಾಷೆ ಅಥವಾ ಕನ್ನಡದ ಕಲಿಕೆಯು ಕಡ್ಡಾಯವಾಗಿದೆ. 3ನೇ ತರಗತಿಯಿಂದ ಕನ್ನಡ ಮಾಧ್ಯಮವಲ್ಲದ ಮಕ್ಕಳಿಗೆ ಕನ್ನಡವನ್ನು ಐಚ್ಛಿಕ ಭಾಷೆಯಾಗಿ ಕಲಿಸಲಾಗುವುದು.

ಆ) ಇಲ್ಲ. 1994-95ನೇ ಸಾಲಿನಿಂದ ಪ್ರಾರಂಭವಾದ ಶಾಲೆಗಳಲ್ಲಿ ಮಕ್ಕಳ ಮಾತೃಭಾಷೆ ಅಥವಾ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಭೋದಿಸಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಕುರಿತು.

789 - ಶ್ರೀ ಯು. ಆರ್ ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1ರ ಹುದ್ದೆಯನ್ನು ವರ್ಗಾಯಿಸುವ ಬಗ್ಗೆ ಯೋಜನೆ ಸರ್ಕಾರದವರ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಇದರಿಂದ ಬಹಳಷ್ಟು ತೊಂದರೆಗಳು ಆಗುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?*

ಇ) *ಹಾಗಿದ್ದಲ್ಲಿ ವರ್ಗಾಯಿಸುವ ಯೋಜನೆಯನ್ನು ಕೈಬಿಡಲಾಗುವುದೇ; ಕೈಬಿಡಲಾಗದಿದ್ದಲ್ಲಿ ಯಾವಾಗ?*

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.